ಸಾಕ್ಷಿಗೆ ದಿನಾಂಕ 21-06-2016 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ.ಆರ್.ಸಿ.ಎಸ್. ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ ಪ್ರ.ವ. ವರದಿಯ ನಕಲು (ಫಿರ್ಯಾದಿ ಪ್ರತಿಯೊಂದಿಗೆ) ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಎಂದು, ಪಂಚನಾಮೆಯ ನಕಲು ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ.2 ಎಂದು, ಎಂ.ವಿ.ಐ. ವರದಿಯ ನಕಲು ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ. 3 ಎಂದು, ಗಾಯದ ಪ್ರಮಾಣ ಪತ್ರದ ನಕಲು ಪ್ರತಿ ಹಾಜರುಪಡಿಸಿದ್ದು ಅದನ್ನು ನಿ.ಪಿ. 4 ಎಂದು, ದೋಷರೋಪಣೆ ಪತ್ರದ ನಕಲು ಪ್ರತಿ ಹಾಜರು ಪಡಿಸಿದ್ದು ಅದನ್ನು ನಿ.ಪಿ. 5 ಎಂದು, ಚಿಕಿತ್ಸೆ ವೆಚ್ಚದ ಬಗ್ಗೆ ಇರುವ 28 ಬಿಲ್‌ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ. 6 ಎಂದು, 17 ಔಷಧಿ ಚೀಟಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ. 7 ಎಂದು, ನನ್ನ ಕುಟುಂಬದ ಹೆಸರಿಗೆ ಇರುವ ಪಡಿತರ ಚೀಟಿಯ ನೋಟರಿ ಪ್ರತಿ , ನನ್ನ ಹೆಸರಿಗೆ ಇರುವ 10ನೇ ತರಗತಿಯ, ಪಿ.ಯು.ಸಿ.ಯ ಅಂಕಪಟ್ಟಿಯ ನೋಟರಿ ಪ್ರತಿ, ಬಿ.ಎ. ಪಧವಿಯ 5 ಅಂಕಪಟ್ಟಿಯ ನೋಟರಿ ಪ್ರತಿ , ಬಿ.ಎಡ್.

ಪಧವಿಯ ಅಂಕಪಟ್ಟಿಯ ನೋಟರಿ ಪ್ರತಿ ಮತ್ತು ಕೆ.ಎಸ್.ಎಂ ನವರು ಕೈಗೊಂಡ ಸಹಕಾರ ಡಿಪ್ಲೊಮೋ ತರಭೇತಿ ಪಡೆದ ಬಗ್ಗೆ ಇರುವ ಪ್ರಮಾಣ ಪತ್ರದ ನೋಟರಿ ಪ್ರತಿ ಮತ್ತು ನನ್ನ ಹೆಸರಿನಲ್ಲಿರುವ ಆಧಾರ್ ಕಾರ್ಡ್‌ನ ನೋಟರಿ ಪ್ರತಿ ( ಈ ಹಂತದಲ್ಲಿ ಸಾಕ್ಷಿ ಆ ದಾಖಲೆಗಳ ಮೂಲ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಟರಿ ಪ್ರತಿಯೊಂದಿಗೆ ಪರಿಶೀಲಿಸಿ, ಸಾಕ್ಷಿಗೆ ಹಿಂದುರುಗಿಸಲಾಯಿತು.) ಅವುಗಳನ್ನು ಕ್ರಮವಾಗಿ ನಿ.ಪಿ.8 ರಿಂದ ನಿ.ಪಿ.14 ಎಂದು, ಎಂ.ಎಸ್.ರಾಮಯ್ಯ ಆಸ್ಪತ್ರೆಯವರು ನೀಡಿದ ಎಂ.ಎಲ್.ಸಿ ರಿಜಿಸ್ಟರ್‌ನ ನಕಲು ಪ್ರತಿ ಹಾಜರುಪಡಿಸಿದ್ದು ಅವುಗಳನ್ನು ನಿ.ಪಿ.15 ಎಂದು, 3 ಸಿಟಿ ಸ್ಕ್ಯಾನ್ ಕ್ಷ-ಕಿರಣ ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿ.ಪಿ.16 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗಾಗಿ, ವಕೀಲರು ಕಾಲಾವಕಾಶ ಕೋರುತ್ತಿದ್ದು, ಕಾಲಾವಕಾಶ ನೀಡಿ, ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)

(ಓ. ಹೇ. ಕೇ. ಸ.ಇ)

3ನೇ ಹೆಚ್ಚುವರಿ ಲಘು ವ್ಯವಹಾರಗಳ
ನ್ಯಾಯಾಧೀಶರು, ಬೆಂಗಳೂರು.

(ಸಾಕ್ಷಿದಾರಳು-ನು ಈದಿನ ನ್ಯಾಯಾಲಯಕ್ಕೆ ತೆರಳುವ ಗಾಡಿಯಲ್ಲಿ – ಊರುಗೋಲಿನ ಸಹಾಯದಿಂದ ತನ್ನ ಪತಿಯ- ಸಹೋದರನ ಸಹಾಯದೊಂದಿಗೆ ನ್ಯಾಯಾಲಯಕ್ಕೆ ಹಾಜರಾಗಿರುತ್ತಾಳೆ-ನೆ.)